# ಪದ್ಯಪಾಠ - 1 ನಿತ್ಯೋತ್ಸವ

## ಅಭ್ಯಾಸ

ಅ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಜೋಗದ ಸಿರಿ ಯಾವುದು?

ಉ. ಜೋಗದ ಜಲಪಾತದ ಧಾರೆಗಳ ಜೋಗದ ಸಿರಿಯಾಗಿವೆ.

2. ತುಂಗಾ ನದಿ ಹೇಗೆ ಹರಿದು ಬರುತ್ತಿದೆ ಎಂದು ಕವಿ ಬಣ್ಣಿಸಿದ್ದಾರೆ?

ಉ. ತನಿಯು ಹೇಗೆ ಬಳುಕುತ್ತದೆಯೋ ಹಾಗೆ ತುಂಗಾ ನದಿಯ ನೀರು ಹರಿದು ಬರುತ್ತದೆ.

3. ಹರಿದ್ವರ್ಣ ಕಾಡುಗಳಲ್ಲಿ ಯಾವ ಜಾತಿಯ ಮರಗಳಿವೆ?

ಉ. ತೇಗ, ಗಂಧ ಇವು ಹರಿದ್ವರ್ಣ ಕಾಡುಗಳಲ್ಲಿರುವ ಮರಗಳು.

4. ಶಾಸನಗಳು ಏನನ್ನು ಸಾರುತ್ತವೆ?

ಉ. ಗತಕಾಲ ವೈಭವನ್ನು ಶಾಸನಗಳಲ್ಲಿ ಸಾಗುತ್ತಿವೆ.

5. ಕನ್ನಡ ಸೀಮೆಯ ಜನರ ಮನಸ್ಸು ಎಂತಹದ್ದು?

ಉ. ಕನ್ನಡ ಸೀಮೆಯ ಜನರ ಮನಸ್ಸು ನಿರ್ಮತ್ಸರವಾದ ಮನಸ್ಸಿನಿಂದ ಕೂಡಿರುತ್ತದೆ.

6. ಕನ್ನಡ ಸೀಮೆಯ ಜನರ ನುಡಿ ಯಾವ ರೀತಿಯದು?

ಉ. ಕನ್ನಡ ಸೀಮೆಯ ಜನರು ಒಳ್ಳೆಯ ನಡತೆ ಉತ್ತಮ ಚಾರಿತ್ರ್ಯತೆಯಿಂದ ಕೂಡಿರುತ್ತದೆ.

ಆ. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

1. ಕನ್ನಡ ನಾಡಿನ ಪ್ರಕೃತಿಯ ನಿತ್ಯೋತ್ಸವವನ್ನು ಕವಿ ಏನೆಂದು ವರ್ಣಿಸಿದ್ದಾರೆ?

ಉ. ಕನ್ನಡ ನಾಡಿನ ಪ್ರಕೃತಿಗೆ ನಿತ್ಯ ನಡೆಯುವ ಉತ್ಸವ ಮಂಗಳಕರವಾದದ್ದು ಬೆಟ್ಟಗುಡ್ಡಗಳಿಂದ ನದಿಗಳಿಂದ ಹರಿಯುವ ನೀರು ಹರಿದ್ವರ್ಣ ಕಾಡುಗಳಿಂದ ಸುಗಂಧ ಭರಿತವಾದ ಮರಗಳಿಂದ ಕಂಗೊಳಿಸುವ ನಮ್ಮ ನಾಡು ಇವೆಲ್ಲ ಕನ್ನಡಾಂಬೆಗೆ ಉತ್ಸವ ಎಂದು ಕವಿ ವರ್ಣಿಸಿದ್ದಾರೆ.

2. ನಾಡಿನ ಇತಿಹಾಸ ನಿತ್ಯೋತ್ಸವವನ್ನು ಎಲ್ಲೆಲ್ಲಿ ಕಾಣಬಹುದಾಗಿದೆ?

ಉ. ಕನ್ನಡ ನಾಡಿನ ಇತಿಹಾಸವನ್ನೆ ತಾಳೆಗರಿ ಪತ್ರಗಳಲ್ಲಿ ದೇಗುಲದ ಭಿತ್ತಿಗಳಲ್ಲಿ ಶಾಸನಗಳಲ್ಲಿ ಚರಿತ್ರೆಯ ಪುಟಗಳಲ್ಲಿ ಕಾಣಬಹುದು.

3. ಕನ್ನಡ ಸೀಮೆಯ ಮಹಿಮೆ ಎಂತಹದ್ದು?

ಉ. ಕನ್ನಡ ನಾಡಿನ ಸೀಮೆಯಲ್ಲಿ ಯಾವ ಮತ ಭೇದವಿಲ್ಲದ ಸ್ವಾರ್ಥ ದ್ವೇಶವಿಲ್ಲದೆ ಎಲ್ಲರೂ ಸಮಾನರು ಎಂಬುದು ಇಲ್ಲಿಯ ಜನರ ನಡೆ ನುಡಿಗಳಲ್ಲಿ ತುಂಬಿದೆ.

ಇ. ಐದು - ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ.

1. ನಿತ್ಯೋತ್ಸವ ಎಂದರೇನು? ಕವಿ ಕನ್ನಡ ನಾಡಿನ ನಿತ್ಯೋತ್ಸವವನ್ನು ಯಾವ ರೀತಿ ಬಣ್ಣಿಸಿದ್ದಾರೆ?

ಉ. ನಿತ್ಯ ನಡೆಯುವ ಮಂಗಳ ಕಾರ್ಯಕ್ಕೆ ನಿತ್ಯೋತ್ಸವ ಎನ್ನುತ್ತಾರೆ. ಇಲ್ಲಿನ ಪ್ರಕೃತಿ ಸೌಂದರ್ಯವನ್ನೇ ಹರಿಯುವ ನದಿ ಜಲಪಾತಗಳಲ್ಲಿ, ಹರಿಯುವ ನೀರನ್ನು ಬಳುಕುವ ತೆಗೆ ಹೋಲಿಸಿದ್ದಾರೆ.

ನಾಡಿನ ಇತಿಹಾಸವನ್ನು ದೇವಾಲಯಗಳ ಭಿತ್ತಿಗಳಲ್ಲಿ ಓಲೆಗರಿ ಪತ್ರಗಳಲ್ಲಿ ಶಾಸನಗಳಲ್ಲಿ ನಾಡಿನ ಹಿರಿಮೆಯನ್ನು ನಮ್ಮ ಶಿಲ್ಪಿಗಳು ಚಿತ್ರಿಸಿದ್ದಾರೆ.

ಈ ನಾಡಿನ ಜನರ ನಡೆ – ನುಡಿ ಮತ್ತು ನಿಸ್ವಾರ್ಥ ಮನೋಭಾವ ದ್ವೇಶ ಅಸೂಯೆ ಇಲ್ಲದಿರುವುದು ಇವೆಲ್ಲವು ನಮ್ಮ ನಾಡಿನ ಜನರ ನಡೆ–ನುಡಿಗಳು ಲೋಕಕ್ಕೆ ಆದರ್ಶವಾಗಿದೆ.

## ಭಾಷಾಭ್ಯಾಸ

ಅ. ಸ್ವಂತ ವಾಕ್ಯ ರಚಿಸಿ.

1. ನಿತ್ಯೋತ್ಸವ : ತಿರುಪತಿಯಲ್ಲಿ ಪ್ರತಿದಿನವು ವೆಂಕಟೇಶ್ವರ ದೇವರಿಗೆ ವಿವಿಧ ರೀತಿ ಸೇವೆಗಳ ನಿತ್ಯೋತ್ಸವ ನಡೆಯುತ್ತದೆ
2. ಉತ್ತುಂಗ : ಹಿಮಾಲಯ ಪರ್ವತವು ಶಿಖರವು ಉತ್ತುಂಗದಲ್ಲಿ ಇದೆ.
3. ಹಿರಿಮೆ : ಕನ್ನಡನಾಡು ಸಂಪತ್ತು ಭರಿತವಾಗಿರುವುದರಿಂದ ನಮಗೆ ಹಿರಿಮೆ ಎನಿಸುತ್ತದೆ.
4. ಇತಿಹಾಸ : ನಾಡಿನ ಇತಿಹಾಸ ವೀರರ ಕೆಚ್ಚು ಜನರ ನಡೆ ನುಡಿಗಳಲ್ಲಿ ಆದರ್ಶವಾಗಿದೆ.

ಆ. ಇಲ್ಲಿರುವ ಪದಗಳನ್ನು ಬಿಡಿಸಿ ಬರೆಯಿರಿ.

1. ನಿತ್ಯೋತ್ಸವ = ನಿತ್ಯ + ಉತ್ಸವ
2. ಮನದುದಾರ = ಮನದ + ಉದಾರ
3. ಲೋಹದದಿರ = ಲೋಹದ + ಅದಿರು
4. ಲೋಕಾಮೃತ = ಲೋಕ + ಅಮೃತ
5. ಸಿಂಹಾಸನ = ಸಿಂಹಾ + ಆಸನ

****